COMPT/UPLOK/GLB/3259/2022/P.O./A.R.E.17

## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/3259/2022
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 10/02/2023

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಕೇಸ್ ವರ್ಕರ್ ಆದ ಶ್ರೀ ಪಿ. ಆರ್. ಗೌತಮ್ ತಂದೆ ಪಿ. ಆರ್. ವೆಂಕಟೇಶ, ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ಜಿಲ್ಲಾ ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರ, ಬಳ್ಳಾರಿ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಕೇಸ್ ವರ್ಕರ್ ಆದ ಶ್ರೀ ಪಿ. ಆರ್. ಗೌತಮ್ ತಂದೆ ಪಿ. ಆರ್. ವೆಂಕಟೇಶ, ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ಜಿಲ್ಲಾ ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರ, ಬಳ್ಳಾರಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀಮತಿ ಅಮ್ರೀನ್‌ಬಾನು ಗಂಡ ಖಲೀಲ್, ಅಬ್ದುಲ್ ಸಲಾಂ ಸ್ಟ್ರೀಟ್, ಕೌಲ್ ಬಜಾರ್, ಬಳ್ಳಾರಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಗೌರವಾನ್ವಿತ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರು ಬಿ.ಇ.ಡಿ ವಿದ್ಯಾರ್ಥಿನಿಯಾಗಿದ್ದು, ದಿನಾಂಕ 10/12/2018 ರಂದು ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಇಲಾಖೆ, ಬೆಂಗಳೂರು ರವರೊಂದಿಗೆ ವಿದ್ಯಾರ್ಥಿ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, ಸದರಿ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಪ್ರಿಂಟ್ ತೆಗೆದು ಪ್ರೋತ್ಸಾಹ ಧನಕ್ಕಾಗಿ ಶಿಫಾರಸ್ಸು ಮಾಡಲು

ದಿನಾಂಕ 13/12/2018 ರಂದು ಬಳ್ಳಾರಿ ನಗರದ ಅಲ್ಪ ಸಂಖ್ಯಾತರ ಇಲಾಖೆಯ ಕಛೇರಿಗೆ ಟಪಾಲ್ ಮುಖಾಂತರ ಕೊಟ್ಟು ಸ್ವೀಕೃತಿ ಪಡೆದಿರುತ್ತಾರೆ. ಆದರೆ ಸದರಿ ಕಛೇರಿಯಿಂದ ಶಿಫಾರಸ್ಸು ಮಾಡಿರುವುದಿಲ್ಲ. ಈ ಬಗ್ಗೆ ವಿಚಾರ ಮಾಡಲು ದಿನಾಂಕ 23/03/2019 ರಂದು ಸದರಿ ಕಛೇರಿಗೆ ಹೋಗಿ ಅಲ್ಲಿ ಎದುರುದಾರರನ್ನು ವಿಚಾರಿಸಲಾಗಿ ಎದುರುದಾರರು ಸದರಿ ಕೆಲಸ ಮಾಡಿಕೊಡಲು 1000/- ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿ, ನಂತರ ರೂ.800/- ನಿಂದ ರೂ.600/- ವರೆಗೆ ಖರ್ಚಾಗುತ್ತದೆ ಎಂದು ಹೇಳಿದ್ದಕ್ಕೆ ದೂರುದಾರರು ತಮ್ಮ ಮನೆಯಲ್ಲಿ ಕೇಳಿ ಸೋಮವಾರ ಹೇಳುವುದಾಗಿ ಹೇಳಿರುತ್ತಾರೆ. ನಂತರ ಕೇಸ್ ವರ್ಕರ್ ಆದ ಎದುರುದಾರರು ತಮ್ಮ ಮೊಬೈಲ್‌ನಿಂದ ದೂರುದಾರರ ಮೊಬೈಲ್‌ಗೆ ಕರೆ ಮಾಡಿ ರೂ.800/- ಹಣವನ್ನು ತರುವಂತೆ ಹೇಳಿದಾಗ ದೂರುದಾರರು ಅಷ್ಟು ಆಗುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಮಧ್ಯಾಹ್ನ 2-12 ಕ್ಕೆ ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರಿಗೆ ಫೋನ್ ಮಾಡಿದಾಗ ಎದುರುದಾರರು ರೂ. 600/- ಹಣವನ್ನು ತರುವಂತೆ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಬಳ್ಳಾರಿ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ದೂರನ್ನು ದಿನಾಂಕ 25/03/2019 ರಂದು ನೀಡಿರುತ್ತಾರೆ. ಸದರಿ ಪೊಲೀಸ್ ಠಾಣೆಯಲ್ಲಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯ ಬಗ್ಗೆ ವಿಚಾರಿಸಿದಾಗ ತನಿಖಾಧಿಕಾರಿಗಳು ಕೇಳಿದಾಗ ಹಾಜರುಪಡಿಸುತ್ತೇನೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಬಳ್ಳಾರಿ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 12/2019 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 25/03/2019 ರಂದು ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ ತಂದೆ ಲೇಟ್ ಗುಳೆಪ್ಪ, ಸಹ ಶಿಕ್ಷಕರು, ಗಾಂಧೀಜಿ ಪ್ರೌಢ ಶಾಲೆ, ಹಲಕುಂದಿ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ ಹಾಗೂ ಸಹ ಪಂಚ ಶ್ರೀ ಕೆ. ಮಲ್ಲಿಕಾರ್ಜುನಗೌಡ ತಂದೆ ಕೆ. ವೀರಭದ್ರಗೌಡ, ಸಹ ಶಿಕ್ಷಕರು, ಗಾಂಧೀಜಿ ಪ್ರೌಢಶಾಲೆ, ಹಲಕುಂದಿ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ದೂರುದಾರರು ಲಂಚದ ಹಣವಾದ 600/- ರೂಪಾಯಿಗಳನ್ನು ನೀಡಿದ್ದು, ಅದನ್ನು ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ ಇವರು ಪರಿಶೀಲಿಸಿದಾಗ 500/- ರೂಪಾಯಿಯ ಒಂದು ನೋಟು ಮತ್ತು 100/- ರೂಪಾಯಿಯ ಒಂದು ನೋಟುಗಳಾಗಿದ್ದು

ಅವುಗಳ ಕ್ರಮ ಸಂಖ್ಯೆ, ಮೌಲ್ಯ ಹಾಗೂ ನೋಟುಗಳ ಸಂಖ್ಯೆಗಳನ್ನು ಒಂದು ಪ್ರತ್ಯೇಕ ಹಾಳೆಯಲ್ಲಿ ಸಹ ಪಂಚ ಶ್ರೀ ಮಲ್ಲಿಕಾರ್ಜುನ ಗೌಡ ಇವರು ಬರೆದಿರುತ್ತಾರೆ.

4) ನಂತರ ತನಿಖಾಧಿಕಾರಿಗಳು ಫಿನಾಫ್ತಲಿನ್ ಪೌಡರ್‌ನ್ನು ತೋರಿಸಿ, ಸೋಡಿಯಂ ಕಾರ್ಬೋನೇಟ್ ಪೌಡರ್ ಇದನ್ನು ಶುದ್ಧವಾದ ನೀರಿನೊಂದಿಗೆ ಬೆರೆಸಿ ದ್ರಾವಣವನ್ನು ತಯಾರಿಸಿ ಬಳಸುವುದಾಗಿ ಮನವರಿಕೆ ಮಾಡಿಕೊಟ್ಟಿರುತ್ತಾರೆ. ಒಂದು ಸ್ವಚ್ಛವಾದ ಪಿಂಗಾಣಿ ಬಟ್ಟಲಿನಲ್ಲಿ ಸಿಬ್ಬಂದಿಯಾದ ಸಿ. ಹೆಚ್. ಸಿ. ಶ್ರೀ ತಿಮ್ಮಾರೆಡ್ಡಿರವರಿಂದ 600/- ರೂಪಾಯಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ತೆಳುವಾಗಿ ಎರಡೂ ಬದಿಗೆ ಸವರಿ, ಅದನ್ನು ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರರವರ ಕೈಯಲ್ಲಿ ತನಿಖಾಧಿಕಾರಿಯವರ ಹೇಳಿಕೆ ಮೇರೆಗೆ ಶ್ರೀ ತಿಮ್ಮಾರೆಡ್ಡಿರವರು ಕೊಟ್ಟಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಸದರಿ ನೋಟುಗಳನ್ನು ಎರಡೂ ಕೈಗಳಿಂದ ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ ಇವರು ಎಣಿಸಿ ದೂರುದಾರರ ಕೈಯಲ್ಲಿ ನೀಡಿದ್ದು, ದೂರುದಾರರು ಎದುರುದಾರರಿಗೆ ಕೊಡಬೇಕಾದ ಹಣವನ್ನು ತಮ್ಮ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ಶ್ರೀ ತಿಮ್ಮಾರೆಡ್ಡಿರವರು ಶುದ್ಧ ನೀರನ್ನು ಹಾಕಿಸಿ ಅದರಲ್ಲಿ ಸೋಡಿಯಂ ಕಾರ್ಬೋನೇಟ್ ಬೆರೆಸಿ ದ್ರಾವಣ ತಯಾರಿಸಿರುತ್ತಾರೆ. ಅದು ಬಣ್ಣ ರಹಿತವಾಗಿರುತ್ತದೆ. ಸದರಿ ದ್ರಾವಣದ ಸ್ವಲ್ಪ ಭಾಗವನ್ನು ಖಾಲಿ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಹಾಕಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ ಇವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಲಾಗಿ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ. ಸದರಿ ದ್ರಾವಣವನ್ನು ಪ್ರತ್ಯೇಕ ಖಾಲಿ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಹಾಕಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

5) ಫಿನಾಫ್ತಲಿನ್ ಪೌಡರ್ ಮತ್ತು ಸೋಡಿಯಂ ಕಾರ್ಬೋನೇಟ್ ಪೌಡರ್ ಇವುಗಳನ್ನು ಪ್ರತ್ಯೇಕವಾಗಿ ಒಂದು ಚಿಕ್ಕ ಹಾಳೆಯನ್ನು ತೆಗೆದುಕೊಂಡು ಚೀಟಿ ಕಟ್ಟಿ ಪ್ರತ್ಯೇಕ ಎರಡು ಕವರ್‌ಗಳಲ್ಲಿ ಹಾಕಿ ಅಂಟಿಸಿ ವಶಪಡಿಸಿಕೊಂಡಿರುತ್ತಾರೆ.

6) ದೂರುದಾರರಿಗೆ ಎದುರುದಾರರ ಮತ್ತು ದೂರುದಾರರ ಮಧ್ಯೆ ಆದಂತಹ ಸಂಭಾಷಣೆಯನ್ನು ರೆಕಾರ್ಡ್ ಮಾಡಿದ ಮೊಬೈಲ್ ಹಾಜರುಪಡಿಸುವಂತೆ ಕೇಳಿದಾಗ, ದೂರುದಾರರು

ಹಾಜರುಪಡಿಸಿದ್ದು, ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ಹಾಕಿ ರೆಕಾರ್ಡ್ ಮಾಡಿದ ದತ್ತಾಂಶದಿಂದ ಎರಡು ಸಿ.ಡಿ.ಗಳನ್ನು ತಯಾರಿಸಿ ಧ್ವನಿಯನ್ನು ಕೇಳಲಾಗಿ ಅದರಲ್ಲಿ ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದು ಮೂಡಿ ಬಂದಿರುತ್ತದೆ. ಸದರಿ ಸಂಭಾಷಣೆಯನ್ನು ಇಬ್ಬರು ಪಂಚರು, ತನಿಖಾಧಿಕಾರಿಗಳು ಹಾಗೂ ದೂರುದಾರರು ಆಲಿಸಿದ್ದು ಇರುತ್ತದೆ. ನಂತರ ಸಿ.ಡಿ.ಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಮುದ್ದೇ ಮಾಲುಗಳನ್ನು ತನಿಖಾಧಿಕಾರಿಯವರ ಕಛೇರಿಯ ಅಲ್ಮೆರಾದಲ್ಲಿಟ್ಟು ಬೀಗ ಹಾಕಿರುತ್ತಾರೆ. ದೂರುದಾರರು ಎದುರುದಾರರ ಬಳಿ ನೆರಳು ಸಾಕ್ಷಿಯೊಂದಿಗೆ ಹೋದಾಗ ದೂರುದಾರರ ಮತ್ತು ಎದುರುದಾರರ ಮಧ್ಯೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ದೂರುದಾರರಿಗೆ ತಿಳಿಸಿರುತ್ತಾರೆ. ನಂತರ ಕಛೇರಿಯಿಂದ ಹೊರಗೆ ಬಂದು ತಲೆಗೆ ಕಟ್ಟಿದ್ದ ಸ್ಕಾರ್ಫನ್ನು ತೆಗೆದು ತನಿಖಾಧಿಕಾರಿಯವರಿಗೆ ಸಂಜ್ಞೆ ನೀಡಬೇಕೆಂದು ತಿಳುವಳಿಕೆ ನೀಡಿರುತ್ತಾರೆ.

7) ಸದರಿ ಪಂಚನಾಮೆ ಕಾಲಕ್ಕೆ ನಡೆದ ಘಟನಾವಳಿಗಳ ಬಗ್ಗೆ ಹಂತ ಹಂತವಾಗಿ ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಸೋನಿ ವಾಯ್ಸ್ ರೆಕಾರ್ಡರ್‌ನ್ನು ನೀಡಿ ಅದರಲ್ಲಿ ಎದುರುದಾರರ ಮತ್ತು ದೂರುದಾರರ ಮಧ್ಯೆ ನಡೆದ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಳ್ಳುವಂತೆ ತಿಳುವಳಿಕೆ ನೀಡಿರುತ್ತಾರೆ. ಸದರಿ ಪ್ರಾಯೋಗಿಕ ಪಂಚನಾಮೆಯನ್ನು ಮಧ್ಯಾಹ್ನ 4-00 ಘಂಟೆಯಿಂದ 5-00 ಘಂಟೆಯವರೆಗೆ ಬಳ್ಳಾರಿ ಎ.ಸಿ.ಬಿ. ಠಾಣೆಯಲ್ಲಿ ಶ್ರೀ ಪ್ರಕಾಶ್ ಎಂ. ಎಂಬ ಸಿ.ಪಿ.ಸಿ. ಲ್ಯಾಪ್‌ಟಾಪ್‌ನಲ್ಲಿ ಕನ್ನಡದಲ್ಲಿ ಬೆರಳಚ್ಚು ಮಾಡಿ ಎಲ್ಲರ ಸಹಿಗಳನ್ನು ಪಡೆದಿರುತ್ತಾರೆ. ನಂತರ ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ನಂತರ ಶುದ್ಧ ನೀರಿನಿಂದ ಎಲ್ಲರ ಕೈಗಳನ್ನು ಸೋಪಿನಿಂದ ತೊಳೆದುಕೊಂಡಿರುತ್ತಾರೆ.

8) ದಿನಾಂಕ 25/03/2019 ರಂದು ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ಸಾಯಂಕಾಲ 5-05 ಕ್ಕೆ ಪೋಲೀಸ್ ಇಲಾಖೆಯ ವಾಹನದಲ್ಲಿ ದೂರುದಾರರು, ಪಂಚರು,

ತನಿಖಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಜೊತೆಯಲ್ಲಿ ಹೊರಟು ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕಛೇರಿಯನ್ನು ಸಂಜೆ 5-15 ಕ್ಕೆ ತಲುಪಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಮತ್ತೊಮ್ಮೆ ಸಂಭಾಷಣೆಯನ್ನು ರೆಕಾರ್ಡ್ ಮಾಡುವ ಬಗ್ಗೆ ಹಾಗೂ ಎದುರುದಾರರು ಲಂಚದ ಹಣ ಕೇಳಿದಾಗ ಹಾಜರುಪಡಿಸುವಂತೆ ಮತ್ತು ಸದರಿ ಹಣವನ್ನು ಹೇಗೆ ಮತ್ತು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸುವಂತೆ ತಿಳುವಳಿಕೆ ನೀಡಿರುತ್ತಾರೆ. ದೂರುದಾರರೊಂದಿಗೆ ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ್‌ರವರನ್ನು ಎದುರುದಾರರ ಕಛೇರಿಗೆ ಕಳುಹಿಸಿರುತ್ತಾರೆ. ಸಹ ಪಂಚ, ತನಿಖಾಧಿಕಾರಿಗಳು ಹಾಗೂ ಅವರ ಸಿಬ್ಬಂದಿ ಕಛೇರಿಯ ಹೊರ ಬದಿಯಲ್ಲಿ ಅಲ್ಲಲ್ಲಿ ಗೌಪ್ಯವಾಗಿ ನಿಂತುಕೊಂಡು ದೂರುದಾರರ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ.

9) ನಂತರ ಸಂಜೆ 5-27 ಕ್ಕೆ ದೂರುದಾರರು ಎದುರುದಾರರ ಕಛೇರಿಯಿಂದ ಹೊರಗೆ ಬಂದು ತಮ್ಮ ತಲೆಗೆ ಕಟ್ಟಿದ್ದ ಸ್ಕಾರ್ಫನ್ನು ತೆಗೆದು ತನಿಖಾಧಿಕಾರಿಯವರಿಗೆ ಸಂಜ್ಞೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಗಳು, ಸಹ ಪಂಚ ಹಾಗೂ ಅವರ ಸಿಬ್ಬಂದಿ ಎದುರುದಾರರ ಕಛೇರಿಗೆ ತಲುಪಿದಾಗ ದೂರುದಾರರು ಇವರೇ ಗೌತಮ್ ಎಂದು ತೋರಿಸಿ ಲಂಚದ ಹಣವನ್ನು ಸ್ವೀಕರಿಸಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ತಿಳಿಸಿರುತ್ತಾರೆ.

10) ಆಗ ತನಿಖಾಧಿಕಾರಿಗಳು ತಮ್ಮ ಗುರುತಿನ ಚೀಟಿಯನ್ನು ತೋರಿಸಿ, ತಮ್ಮ ಹಾಗೂ ಪಂಚರ ಪರಿಚಯ ಮಾಡಿಕೊಟ್ಟು ನಂತರ ಎದುರುದಾರರ ಹೆಸರು ವಿಳಾಸ ಮತ್ತು ಹುದ್ದೆ ಈ ಬಗ್ಗೆ ವಿಚಾರಿಸಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಬಲಗೈಯಿಂದ ಪಡೆದು ಎಣಿಸಿ, ಎದುರುದಾರರು ಧರಿಸಿದ್ದ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿದ್ದ ಬಗ್ಗೆ ದೂರುದಾರರು ಹಾಗೂ ನೆರಳು ಸಾಕ್ಷಿದಾರರು ತನಿಖಾಧಿಕಾರಿಯವರಿಗೆ ತಿಳಿಸಿರುತ್ತಾರೆ.

11) ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿ.ಪಿ.ಸಿ. ಪ್ರಕಾಶ್ ರವರು ಎರಡು ಪಿಂಗಾಣಿ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣಗಳನ್ನು ತಯಾರಿಸಿ, ಮಾದರಿಗಾಗಿ ಒಂದು ಖಾಲಿ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಸದರಿ ದ್ರಾವಣವನ್ನು ಪ್ರತ್ಯೇಕವಾಗಿ ತೆಗೆದು ವಶಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಎರಡು ಪಿಂಗಾಣಿ ಬಟ್ಟಲುಗಳಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದು ಎರಡೂ

ದ್ರಾವಣಗಳನ್ನು ಪ್ರತ್ಯೇಕವಾಗಿ ಖಾಲಿ ಬಾಟಲ್‌ಗಳಲ್ಲಿ ಶೇಖರಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರೊಂದಿಗೆ ಲಂಚದ ಹಣವನ್ನು ಇಟ್ಟಿರುವ ಸ್ಥಳದ ಬಗ್ಗೆ ವಿಚಾರಿಸಲಾಗಿ ಎದುರುದಾರರು ಅವರ ಪ್ಯಾಂಟಿನ ಎಡಬದಿಯ ಜೇಬಿನಲ್ಲಿ ಇಟ್ಟಿರುವುದಾಗಿ ಹೇಳಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಸದರಿ ಹಣವನ್ನು ನೆರಳು ಸಾಕ್ಷಿ ಶ್ರೀ ಜಿ. ಸಿದ್ದೇಶ್ವರ ಇವರು ಎದುರುದಾರರ ಪ್ಯಾಂಟಿನ ಎಡಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಮೌಲ್ಯ ಹಾಗೂ ನೋಟುಗಳ ಸಂಖ್ಯೆಗಳಿಗೆ ತಾಳೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಎದುರುದಾರರು ತೊಟ್ಟಿರುವ ಪ್ಯಾಂಟನ್ನು ಪಡೆದು, ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎದುರುದಾರರ ಪ್ಯಾಂಟಿನ ಎಡ ಬದಿಯ ಕಿಸೆಯನ್ನು ಹೊರಮಗ್ಗಲು ಮಾಡಿ ಸದರಿ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ದ್ರಾವಣವನ್ನು ಪ್ರತ್ಯೇಕವಾಗಿ ಖಾಲಿ ಬಾಟಲ್‌ನಲ್ಲಿ ಶೇಖರಿಸಿ ವಶಪಡಿಸಿಕೊಂಡಿರುತ್ತಾರೆ. ಪ್ಯಾಂಟನ್ನೂ ಸಹ ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ.

12) ಎದುರುದಾರರ ಇಲಾಖೆಯ ಸಿಬ್ಬಂದಿಯವರಾದ ಶ್ರೀ ಕೆ. ಮಹಮ್ಮದ್ ರಾಜಾ ತಂದೆ ದಿ: ಅಜ್ಮತುಲ್ಲಾ, ದ್ವಿ.ದ.ಸ. ಹಾಗೂ ಶ್ರೀ ವೀರೇಂದ್ರ ತಂದೆ ಬಸವನಗೌಡ, ಕಂಪ್ಯೂಟರ್ ಆಪರೇಟರ್ ಇಬ್ಬರೂ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕೆಲಸ ನಿರ್ವಹಿಸುವವರಾಗಿದ್ದು ಅವರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ರೆಕಾರ್ಡ್ ಮಾಡಿದ ಸಿ. ಡಿ. ಗಳನ್ನು ಕೇಳಿಸಲಾಗಿ ಅದರಲ್ಲಿಯ ಒಂದು ಧ್ವನಿ ಎದುರುದಾರರದ್ದಾಗಿರುತ್ತದೆ ಎಂದು ಗುರ್ತಿಸಿರುತ್ತಾರೆ ಹಾಗೂ ಸದರಿ ಸಂಭಾಷಣೆಯನ್ನೂ ಸಹ ಲಿಪಿಕರಣ ಮಾಡಿ ಸಿ.ಡಿ.ಗಳನ್ನು ಕವರಿನಲ್ಲಿ ಹಾಕಿ ತನಿಖಾಧಿಕಾರಿಗಳು ಜಪ್ತಿ ಮಾಡಿರುತ್ತಾರೆ.

13) ಲಂಚದ ಹಣವನ್ನು ಎದುರುದಾರರು ಕೇಳಿ ಪಡೆಯುವಾಗ ನಡೆದ ಸಂಭಾಷಣೆಯನ್ನು ದೂರುದಾರರು ವಾಯ್ಸ್ ರೆಕಾರ್ಡರ್‌ನಲ್ಲಿ ಮುದ್ರಣ ಮಾಡಿಕೊಂಡಿದ್ದು, ಸದರಿ ಸಂಭಾಷಣೆಯನ್ನು ಕೇಳಿಸಲಾಗಿ ಅವುಗಳಲ್ಲಿಯೂ ಸಹ ಎದುರುದಾರರ ಧ್ವನಿಯನ್ನು ಲಿಪಿಕರಣ ಮಾಡಿರುತ್ತಾರೆ.

14) ತನಿಖಾಧಿಕಾರಿಗಳು ಈ ಘಟನಾವಳಿಗಳ ಬಗ್ಗೆ ಸ್ವರಕ್ಷಣಾ ಹೇಳಿಕೆ ನೀಡುವಂತೆ ಕೇಳಲಾಗಿ, ಸದರಿ ಹೇಳಿಕೆಯಲ್ಲಿ ಎದುರುದಾರರು "ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅಂದರೆ ಗೌತಮ್ ಪಿ. ಆರ್. ತಂದೆ ವೆಂಕಟೇಶ ಪಿ. ಆರ್. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಬಳ್ಳಾರಿ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರದಲ್ಲಿ ಡಾಟಾ ಎಂಟ್ರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 23/03/2019 ರಂದು ಡಿ. ಎಡ್. ಮತ್ತು ಬಿ.ಇ.ಡಿ. ಪ್ರೋತ್ಸಾಹ ಧನ ಅಡಿ ಅರ್ಜಿದಾರಳಾದ ಒಬ್ಬರಿಗೆ ಹಣದ ಆಸೆಯಿಂದ ಹಣವನ್ನು ಕೇಳಿದ್ದು, ಸದರಿರವರು ದಿನಾಂಕ 25/03/2019 ರಂದು ನನಗೆ 600/- ನೀಡಿದ್ದು, ತಪ್ಪಾಗಿರುತ್ತದೆ. ಈ ರೀತಿ ಇನ್ನು ಮುಂದೆ ತಪ್ಪು ಮಾಡುವುದಿಲ್ಲ ಎಂದು ಮಾನ್ಯರಲ್ಲಿ ವಿನಂತಿಸಿ ಒಂದು ಬಾರಿ ನನ್ನನ್ನು ಬಿಟ್ಟುಬಿಡಲು ಮಾನ್ಯರಲ್ಲಿ ಪ್ರಾರ್ಥಿಸುತ್ತೇನೆ" ಎಂದು ರಕ್ಷಣಾತ್ಮಕ ಹೇಳಿಕೆ ನೀಡಿರುವುದಾಗಿ ತನಿಖಾಧಿಕಾರಿಗಳು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ.

15) ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಕೇಳಲಾಗಿ ಸದರಿಯವರು 15 ಮೂಲ ದಾಖಲಾತಿಗಳನ್ನು ಪಂಚರ ಸಮಕ್ಷಮ ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ ಅವುಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು ಎದುರುದಾರರಿಂದ ದೃಢೀಕರಿಸಿ ವಶಕ್ಕೆ ಪಡೆದಿದ್ದು, ಮೂಲ ದಾಖಲಾತಿಗಳನ್ನು ಹಿಂದಿರುಗಿಸಿರುತ್ತಾರೆ.

16) ಸದರಿ ಜಪ್ತಿ ಪಂಚನಾಮೆ ಪ್ರಕ್ರಿಯೆ ಫೋಟೋಗಳನ್ನು ಹಂತ ಹಂತವಾಗಿ ತೆಗೆದಿರುತ್ತಾರೆ. ತನಿಖಾಧಿಕಾರಿಗಳು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಸಾಯಂಕಾಲ 5-27 ಘಂಟೆಯಿಂದ ರಾತ್ರಿ 8-30 ಘಂಟೆಯವರೆಗೆ ಬಳ್ಳಾರಿ ನಗರದಲ್ಲಿರುವ ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿ ಸಿ.ಪಿ.ಸಿ. ಶ್ರೀ ದಿವಾಕರ ಇವರಿಂದ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿರುತ್ತಾರೆ.

17) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

18) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ

ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

19) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 28/10/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಈ ಪ್ರಕರಣದ ಸಂಪೂರ್ಣ ವಿಷಯವನ್ನು ನಿರಾಕರಿಸಿದ್ದು ತಮ್ಮ ಸಮಜಾಯಿಷಿಯಲ್ಲಿ "ಅಂದು ನಾನು ಕಛೇರಿ ಕೆಲಸ ಮುಗಿಸಿಕೊಂಡು ಮನೆಗೆ ಹೊರಟಿದ್ದೆ ಆದರೆ ದೂರುದಾರರು ನನಗೆ ಪದೇ ಪದೇ ಕರೆ ಮಾಡಿ ಕಛೇರಿಗೆ ಕರೆಸಿಕೊಂಡರು. ನಾನು ಕಛೇರಿಯ ವೇಳೆಯ ನಂತರವೇ ಅವರಿಂದ ಹಣ ಸ್ವೀಕರಿಸಿದೆ. ಆದರೆ ಯಾವುದೇ ಸರ್ಕಾರದ ಕೆಲಸ ಮಾಡಿಸಿಕೊಡಲು ಅಥವಾ ಯಾವುದೇ ಯೋಜನೆಯಡಿ ಶಿಫಾರಸ್ಸು ಮಾಡಲು ಅಥವಾ ಯೋಜನೆಯಡಿ ಅರ್ಹರನ್ನಾಗಿ ಮಾಡಲು ನಾನು ಹಣ ಸ್ವೀಕರಿಸಿಲ್ಲ. ಹೊರತಾಗಿ ಹಾಲುಣಿಸುವ ತಾಯಿ ಎಂದು ಅನಾವಶ್ಯಕವಾಗಿ ಅವರಿಗೆ ಸಹಾಯ ಮಾಡಲು ಮುಂದಾಗಿ ಸಮಸ್ಯೆಯಲ್ಲಿ ಸಿಕ್ಕಿಕೊಂಡೆ. ನಾನು ಯಾವುದೇ ರೀತಿಯ ಲಂಚ ಸ್ವೀಕರಿಸಿರುವುದಿಲ್ಲ." ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಸದರಿಯವರ ಸಮಜಾಯಿಷಿಗೆ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

20) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸಾರ್ವಜನಿಕ ನೌಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

21) ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರಾದ ಆದ ಶ್ರೀ ಪಿ. ಆರ್. ಗೌತಮ್ ತಂದೆ ಪಿ. ಆರ್. ವೆಂಕಟೇಶ, ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ಜಿಲ್ಲಾ

ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರ, ಬಳ್ಳಾರಿ ಇವರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಭ್ರಷ್ಟಾಚಾರವೆಸಗಿ, ಗುರುತರವಾದ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ ಇವರಿಗೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

22) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು **ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/2/23

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.